ತಡೆಯಲು ರೆಫರಿಗಳು ಚಾವಟಿ ಹಿಡಿದಿರುತ್ತಿದ್ದರು. ಮೋಸ ಮಾಡಿದವರ ಹೆಸರುಗಳನ್ನು ಪ್ರೇಕ್ಷಕರು ಒಲಿಂಪಿಯಾದಲ್ಲಿ ಅಲ್ಲಲ್ಲಿ ಕೆತ್ತುತ್ತಿದ್ದರಂತೆ.

## ತೀರ್ಥಯಾತ್ರೆಯಂಥ ಪಯಣ

ಕ್ರೀಡೆಗಳ ದಿನಾಂಕ ಘೋಷಿಸಿದ ಕ್ಷಣದಿಂದ ಇಡೀ ಗ್ರೀಸ್ ಜನ ಹಬ್ಬದಂತೆ ಸಂಭ್ರಮಿಸುತ್ತಿದ್ದರು. ತೀರ್ಥಯಾತ್ರೆ ಹೊರಡುವ ಭಕ್ತಾದಿಗಳಂತೆ ಜನ ಒಲಿಂಪಿಯಾಗೆ ಪಯಣ ಆರಂಭಿಸುತ್ತಿದ್ದರು. ಈಜಿಪ್ಟ್, ಉತ್ತರ ಆಫ್ರಿಕಾ, ಸಿರಿಯಾ, ಏಷ್ಯಾ ಮೈನರ್ ಮತ್ತು ಸಿಸಿಲಿಗಳಷ್ಟು ದೂರ ನೆಲೆಸಿದ್ದ ಗ್ರೀಕರು ಸಹ ಭಾಗವಹಿಸಲು, ವೀಕ್ಷಿಸಲು ಬರುತ್ತಿದ್ದರು. ಬಹಳಷ್ಟು ಜನ ನಡೆಯುತ್ತಲೇ ರಾತ್ರಿ ಬಯಲಲ್ಲೇ ಮಲಗಿ ಪ್ರಯಾಣಿಸುತ್ತಿದ್ದರೆ, ಸಿರಿವಂತರು ಕುದುರೆ, ರಥಗಳಲ್ಲಿ ಬರುತ್ತಿದ್ದರು. ಅಯೋನಿಯನ್ ಸಾಗರದ ದಡ ಹತ್ತಿರದಲ್ಲೇ ಇದ್ದುದರಿಂದ ಹೆಚ್ಚಿನವರು ಹಡಗುಗಳಲ್ಲಿ ಬರುತ್ತಿದ್ದರು. ಜನ ಸೇರಿ ಜಾತ್ರೆಯ ವಾತಾವರಣ ಇರುತ್ತಿದ್ದುದರಿಂದ ಬೀದಿಬದಿ ವ್ಯಾಪಾರಿಗಳು, ಸಣ್ಣಪುಟ್ಟ ವಸ್ತುಗಳನ್ನು ಮಾರುವವರು, ಕ್ರೀಡಾಪಟುಗಳು ತಮ್ಮ ಶಪಥ ಹರಕೆಗೆ ಬಲಿ ಕೊಡುತ್ತಿದ್ದುದರಿಂದ ಕುರಿ, ಹಂದಿ ಸಾಕುವವರು ತಮ್ಮ ಹಿಂಡುಗಳನ್ನು ತರುತ್ತಿದ್ದರು. ರೈತರು ತಾವು ತಯಾರಿಸಿರುವ ವೈನ್‌ನ ಜಾಡಿ, ಬುರುಡೆಗಳನ್ನು ಮಾರಾಟಕ್ಕೆ ಹೊತ್ತು ತರುತ್ತಿದ್ದರು.

ಸಿರಿವಂತ ಹಾಗೂ ಗಣ್ಯ ಅತಿಥಿಗಳು ಉಳಿದುಕೊಳ್ಳಲು ಲಿಯೊನಿಡಾಸ್ ಎಂಬ ಸಿರಿವಂತ ಕ್ರಿ.ಪೂ. 4ನೇ ಶತಮಾನದ ಅಂತ್ಯದಲ್ಲಿ ಕಟ್ಟಿಸಿದ್ದ ಲಿಯೋನೈಡಾನ್ ಹೋಟೆಲ್ ಅವಶೇಷಗಳು ಈಗಲೂ ಇವೆ. ಕ್ರೀಡಾಪಟುಗಳು ಉಳಿದುಕೊಳ್ಳಲು ಹಾಗೂ ಅಭ್ಯಾಸ, ಕಸರತ್ತು ಮಾಡಲು ಜಿಮ್ನಾಸಿಯಂ ಇದ್ದು, ಆ ಕಟ್ಟಡದ ಕೆಲವು ಸಾಲುಕಂಬಗಳ ಅವಶೇಷಗಳು ಈಗಲೂ ನಿಂತಿವೆ.

ಒಲಿಂಪಿಯಾ ಕ್ರೀಡಾ ಕ್ಷೇತ್ರವಾಗುವ ಮೊದಲು ದೇವರದೇವ ಜ್ಯೂಸ್‌ನ ಕ್ಷೇತ್ರವಾಗಿತ್ತು. ಅಲ್ಲಿ ಆತನಿಗಾಗಿ ಇಡೀ ಪೆಲೊಪೊನ್ನೇಸ್‌ನಲ್ಲಿಯೇ ದೊಡ್ಡದಾದ ಒಂದು ಬೃಹತ್ ಹಾಗೂ ವೈಭವದ ಮಂದಿರವನ್ನು ಕ್ರಿ.ಪೂ. 5ನೇ ಶತಮಾನದಲ್ಲಿ ನಿರ್ಮಿಸಲಾಗಿತ್ತು. ಅದರಲ್ಲಿ ಜ್ಯೂಸ್ ದೇವತೆ ಕೂತಿರುವ, ಸುಮಾರು 43 ಅಡಿ ಎತ್ತರದ ವಿಗ್ರಹವಿತ್ತೆಂದು ದಾಖಲೆಗಳು ತಿಳಿಸುತ್ತವೆ ಹಾಗೂ ಅದು ಪ್ರಾಚೀನ ಜಗತ್ತಿನ ಏಳು ಮಹಾ ಅದ್ಭುತಗಳಲ್ಲಿ ಒಂದಾಗಿತ್ತು ಎನ್ನಲಾಗಿದೆ. ಇಂದು ಆ ದೇವಾಲಯದ ಬೃಹತ್ ಕಂಬಗಳು ಮುರಿದು ಬಿದ್ದಿರುವ ರಾಶಿ ರಾಶಿ ಅವಶೇಷಗಳು ಎಲ್ಲೆಡೆ ಹರಡಿವೆ. ಜ್ಯೂಸ್‌ನ ಮಂದಿರಕ್ಕೂ ಹಳೆಯದು ಆತನ ಪತ್ನಿ (ಆಕೆ ಆತನ ಸಹೋದರಿಯೂ ಹೌದು) ಹೇರಾಳ ಮಂದಿರ. ಅದರ ಅವಶೇಷಗಳೂ ಇವೆ ಹಾಗೂ ಇಂದಿಗೂ ಹೇರಾಳ ಮಂದಿರದ ಮುಂಭಾಗದಲ್ಲಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಆಧುನಿಕ ಒಲಿಂಪಿಕ್ ಕ್ರೀಡೆಗಳಿಗಾಗಿ ಸೂರ್ಯನ ಕಿರಣಗಳಿಂದ ‘ಪ್ಯಾರಾಬೊಲಾಯ್ಡ್’ ಕನ್ನಡಿ ಬಳಸಿ ಒಲಿಂಪಿಕ್ ಜ್ವಾಲೆಯನ್ನು ಹೊತ್ತಿಸಿ ಒಲಿಂಪಿಯಾದಿಂದ ಒಲಿಂಪಿಕ್ ಕ್ರೀಡೆಗಳು ನಡೆಯುವ ಸ್ಥಳಕ್ಕೆ ಸಾಗಿಸಲಾಗುತ್ತದೆ.

ಪ್ರಾಚೀನ ಒಲಿಂಪಿಕ್ ಕ್ರೀಡೆಗಳಲ್ಲಿ ಕ್ರಿ.ಪೂ. 2ನೇ ಶತಮಾನದ ಕ್ರೀಡೆಗಳಲ್ಲಿ ಗ್ರೀಕರು ಮಾತ್ರ (ಗುಲಾಮರಿಗೆ ಅವಕಾಶವಿರಲಿಲ್ಲ) ಭಾಗವಹಿಸುವಂತಿತ್ತು. ರೆಫರಿಗಳು ಪ್ರತಿಯೊಬ್ಬ ಕ್ರೀಡಾಪಟುವಿನ ವಂಶವೃಕ್ಷವನ್ನು ಜಾಲಾಡುತ್ತಿದ್ದರು. ಸ್ಪರ್ಧಿಗಳು ಭಾಗವಹಿಸುವ ಹಿಂದಿನ ಹತ್ತು ತಿಂಗಳು ಸತತ ಅಭ್ಯಾಸ ಮಾಡಿರಬೇಕಿತ್ತು ಹಾಗೂ ಹಾಗೆಂದು ಶಪಥ ಮಾಡಬೇಕಾಗಿತ್ತು. ಹಾಗಾಗಿ ಇದು ಸ್ಥಿತಿವಂತರು, ಮೇಲ್ವರ್ಗದವರ ಕ್ರೀಡೆಗಳಾಗಿತ್ತು ಎನ್ನುತ್ತಾರೆ.

ಕ್ರಿ.ಪೂ. 2ನೇ ಶತಮಾನದಲ್ಲಿ ರೋಮನ್ನರು ಗ್ರೀಸ್ ದೇಶವನ್ನು ಆಕ್ರಮಿಸಿದರು. ರೋಮನ್ ಆಡಳಿತದಲ್ಲಿ ಒಲಿಂಪಿಕ್ ಕ್ರೀಡೆಗಳಿಗೆ ಹಿನ್ನಡೆಯಾಯಿತು. ಅವರು ಹಲವಾರು ಬದಲಾವಣೆಗಳನ್ನು ತಂದರು. ಕ್ರಿ.ಶ. 65ರಲ್ಲಿ ರೋಮನ್ ದೊರೆ ನೀರೊ ತಾನೂ ಕುದುರೆ ರಥದ ಸ್ಪರ್ಧೆಯಲ್ಲಿ ಭಾಗವಹಿಸಿದ. ಸ್ಪರ್ಧೆಯಲ್ಲಿ ಬಿದ್ದು ಆತ ಸೋತರೂ ತಾನೇ ಗೆದ್ದಿರುವುದಾಗಿ ಘೋಷಿಸಿಕೊಂಡ ಹಾಗೂ ಆಲಿವ್ ಎಲೆಗಳ ಕಿರೀಟ ತನಗೇ ತೊಡಿಸಿ ಸನ್ಮಾನಿಸಬೇಕೆಂದು ಆದೇಶಿಸಿದ. ಮುಂದಿನ ವರ್ಷ ನೀರೊ ಆತ್ಮಹತ್ಯೆಯಿಂದ ತೀರಿಕೊಂಡ ನಂತರ 211ನೇ ಒಲಿಂಪಿಯಾಡ್‌ನ ಎಲ್ಲ ದಾಖಲೆಗಳನ್ನು ಅಳಿಸಿಹಾಕಿ ಅದರಿಂದ ನೀರೋನ ಹೆಸರನ್ನು ತೆಗೆದುಹಾಕಿದರಂತೆ.

## ಹೂತುಹೋದ ಒಲಿಂಪಿಯಾ

ಒಲಿಂಪಿಕ್ ಕ್ರೀಡೆಗಳು ಕ್ರಿ.ಶ. 393ರವರೆಗೂ ನಡೆದವು. ಆ ವರ್ಷದಲ್ಲಿ ಕ್ರಿಶ್ಚಿಯನ್ ದೊರೆ ಮೊದಲನೇ ಥಿಯೊಡೋಸಿಯಸ್ ಒಲಿಂಪಿಕ್ ಕ್ರೀಡೆಗಳನ್ನು ‘ಪೇಗನ್’ (ಅನಾಗರಿಕ, ಅಧಾರ್ಮಿಕ) ಸಂಸ್ಕೃತಿಯೆಂದು ನಿಲ್ಲಿಸಿದ. ಅವನ ಮೊಮ್ಮಗ ಎರಡನೇ ಥಿಯೊಡೋಸಿಯಸ್ ಒಲಿಂಪಿಯಾ ಸ್ಥಳವನ್ನೇ ನಾಶ ಮಾಡಲು ಆದೇಶಿಸಿದ. ಅದರ ಜೊತೆಗೆ ಕ್ರಿ.ಶ. 6ನೇ ಶತಮಾನದಲ್ಲಿ ನಡೆದ ಭೂಕಂಪಗಳು ಹಾಗೂ ಪ್ರವಾಹಗಳು ಒಲಿಂಪಿಯಾವನ್ನು ನಾಶ ಮಾಡಿದವು ಹಾಗೂ ಆ ಸ್ಥಳ ಐದು ಮೀಟರ್ ಮೆಕ್ಕಲು ಮಣ್ಣಿನಲ್ಲಿ ಹೂತುಹೋಗಿ ಜನಮಾನಸದಿಂದ ಕಣ್ಮರೆಯಾಯಿತು. ಪುನಃ ಒಲಿಂಪಿಯಾ ಬೆಳಕಿಗೆ ಬಂದದ್ದು 1766ರಲ್ಲಿ ಬ್ರಿಟಿಷ್ ಅನ್ವೇಷಕ ರಿಚರ್ಡ್ ಚಾಂಡ್ಲರ್‌ನ ಮೂಲಕ.

ಪ್ರಾಚೀನ ಒಲಿಂಪಿಕ್ ಕ್ರೀಡಾ ಪರಂಪರೆಗೆ ಬೆಳಕು ದೊರೆತು ಆಧುನಿಕ ಒಲಿಂಪಿಕ್ ಕ್ರೀಡಾ ಸ್ಪರ್ಧೆಗಳು ಪ್ರಾರಂಭವಾದದ್ದು 1896ರಲ್ಲಿ. ಪ್ರಾಚೀನ ಗ್ರೀಸ್‌ನ ಪ್ರಮುಖ ಸ್ಥಳವಾಗಿದ್ದ ಹಾಗೂ ಈಗ ಆಧುನಿಕ ನಗರವೂ ಆಗಿರುವ ಅಥೆನ್ಸ್‌ನಲ್ಲಿ. ಫ್ರೆಂಚ್ ಶ್ರೀಮಂತ ಪಿಯೆರ್ರೆ ದ ಕೂಬರ್ಟಿನ್ ಎಂಬಾತ ‘ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ’ ಸ್ಥಾಪಿಸಿ ಅದರ ಮೂಲಕ ಆಧುನಿಕ ಒಲಿಂಪಿಕ್ಸ್ ಕ್ರೀಡೆಗಳನ್ನು ಪ್ರಾರಂಭಿಸಿದ. ಆ ಕ್ರೀಡೆಗಳಲ್ಲಿ ಹದಿನಾಲ್ಕು ಯೂರೋಪಿಯನ್ ರಾಷ್ಟ್ರಗಳು ಮಾತ್ರ ಭಾಗವಹಿಸಿದ್ದವು ಹಾಗೂ ಅದರಲ್ಲಿಯೂ ಯಾವುದೇ ಮಹಿಳಾ ಕ್ರೀಡಾಪಟುಗಳಿರಲಿಲ್ಲ. ನಂತರ 1900ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಒಲಿಂಪಿಕ್ ಕ್ರೀಡೆಗಳಲ್ಲಿ ಮಹಿಳೆಯರಿಗೆ ಭಾಗವಹಿಸಲು ಅವಕಾಶ ನೀಡಲಾಯಿತು. ಆಧುನಿಕ ಒಲಿಂಪಿಕ್ಸ್‌ನದು ಮತ್ತೊಂದು ಚರಿತ್ರೆ.

**ಚಿತ್ರಗಳು ಲೇಖಕರವು**



ಸಿರಿವಂತ ಹಾಗೂ ಗಣ್ಯ ಅತಿಥಿಗಳು ಉಳಿದುಕೊಳ್ಳಲು ಲಿಯೊನಿಡಾಸ್ ಎಂಬುವವನು ಕ್ರಿ.ಪೂ. ನಾಲ್ಕನೇ ಶತಮಾನದ ಅಂತ್ಯದಲ್ಲಿ ಕಟ್ಟಿಸಿದ್ದ ಲಿಯೋನೈಡಾನ್ ಹೋಟೆಲ್‌ನ ಅವಶೇಷಗಳು.
ಒಳಚಿತ್ರ: ಕಂಪ್ಯೂಟರ್ ಕೃತಕ ಬುದ್ಧಿಮತ್ತೆ ಬಳಸಿ ರೂಪಿಸಿರುವ ಹೋಟೆಲ್‌ನ ಮಾದರಿ.